POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 4.1.2026

# ವೃಷಭ ಸಿನಿಮಾ ಬಜೆಟ್ ಎಪ್ಪತ್ತು ಕೋಟಿ ಟೋಟಲ್ ಕಲೆಕ್ಷನ್ ಒಂದೂವರೆ ಕೋಟಿ...

ಮೋಹನ್‌ಲಾಲ್ ಅಭಿನಯದ 'ವೃಷಭ' ಸಿನಿಮಾ 70 ಕೋಟಿ ಬಜೆಟ್ ಹೊಂದಿದ್ದು, ವಿಶ್ವದಾದ್ಯಂತ ಕೇವಲ 1.5 ಕೋಟಿ ರೂಪಾಯಿ ಗಳಿಸಿ ದೊಡ್ಡ ದುರಂತ ಕಂಡಿದೆ. ಸ್ಟಾರ್ ಹೀರೋ ಇದ್ದರೂ ಸಿನಿಮಾ ಹೀನಾಯವಾಗಿ ಸೋತಿದೆ. ಹಳೆಯ ಕಥೆ ಮತ್ತು ನಿರೂಪಣಾ ಶೈಲಿ ಜನರನ್ನು ಸೆಳೆಯುವಲ್ಲಿ ವಿಫಲವಾಗಿರುವುದು ಇದಕ್ಕೆ ಮುಖ್ಯ ಕಾರಣ. ನಿರ್ಮಾಪಕರಿಗೆ ಅಪಾರ ನಷ್ಟ ಉಂಟಾಗಿದೆ.



ಸ್ಟಾರ್ ಹೀರೋಗಳು ಸಿನಿಮಾದಲ್ಲಿ ನಟಿಸಿದ್ದಾರೆ ಎಂದರೆ ಬಹುತೇಕ ಸಂದರ್ಭಗಳಲ್ಲಿ ಹಾಕಿದ ಬಂಡವಾಳ ಮರಳಿ ಬರುತ್ತದೆ ಎಂಬ ನಂಬಿಕೆ ನಿರ್ಮಾಪಕರಿಗೆ ಇರುತ್ತದೆ. ನಿರ್ಮಾಪಕರು ಸೇಫ್ ಆಗುತ್ತಾರೆ. ಸಲ್ಮಾನ್ ಖಾನ್, ದಳಪತಿ ವಿಜಯ್, ರಜನಿಕಾಂತ್ ಸೇರಿದಂತೆ ಅನೇಕರ ಸಿನಿಮಾ ವಿಮರ್ಶೆಯಲ್ಲಿ ಸೋತರೂ ಒಳ್ಳೆಯ ಗಳಿಕೆ ಮಾಡಿದ ಉದಾಹರಣೆ ಇದೆ. ಈಗ 'ವೃಷಭ' ಸಿನಿಮಾದಲ್ಲಿ ಅದು ಸುಳ್ಳಾಗಿದೆ. ಡಿಸೆಂಬರ್ 25ರಂದು ರಿಲೀಸ್ ಆದ ಮೋಹನ್ ಲಾಲ್ ಅಭಿನಯದ ಈ ಚಿತ್ರದ ಬಜೆಟ್ 70 ಕೋಟಿ ರೂಪಾಯಿ. ಭಾರತದ ಒಟ್ಟಾರೆ ಗಳಿಕೆ ಒಂದೂವರೆ ಕೋಟಿ ರೂಪಾಯಿ.

ಕನ್ನಡದ ನಂದ ಕಿಶೋರ್ ಅವರು 'ವೃಷಭ' ಚಿತ್ರಕ್ಕೆ ನಿರ್ದೇಶನ ಮಾಡಿದ್ದಾರೆ. ಈ ಮೊದಲು ಅವರು ಕನ್ನಡದಲ್ಲಿ 'ಪೊಗರು' ರೀತಿಯ ಸಿನಿಮಾಗಳನ್ನು ನೀಡಿದ್ದಾರೆ. ಈಗ ಅವರು ಮಲಯಾಳಂಗೆ ತೆರಳಿದ್ದು ಅಲ್ಲಿ ನಿರೀಕ್ಷಿತ ಮಟ್ಟದ ಗೆಲುವು ಸಿಕ್ಕಿಲ್ಲ. ಸಿನಿಮಾದಲ್ಲಿ ಮೋಹನ್‌ಲಾಲ್ ಜೊತೆ ಕನ್ನಡದವರಾದ ಸಮರ್ಜಿತ್ ಲಂಕೇಶ್, ರಾಗಿಣಿ ದ್ವಿವೇದಿ, ಗರುಡ ರಾಮ್ ಮೊದಲಾದವರು ನಟಿಸಿದ್ದಾರೆ.

'ವೃಷಭ' ಸಿನಿಮಾ ಪುನರ್ಜನ್ಮದ ಕಥೆಯನ್ನು ಹೊಂದಿದೆ. ಈ ಸಿನಿಮಾದಲ್ಲಿ ರಾಜರ ಕಥೆ ಕೂಡ ಬರುತ್ತದೆ. ಹೀಗಾಗಿ, ಅದ್ದೂರಿ ಸೆಟ್‌ಗಳ ನಿರ್ಮಾಣ ಮಾಡಲಾಗಿತ್ತು. ಇದಕ್ಕೆ ಸಾಕಷ್ಟು ಹಣ ವ್ಯಯಿಸಲಾಗಿದೆ. ಒಂದು ಅಂದಾಜಿನ ಪ್ರಕಾರ ಸಿನಿಮಾದ ಬಜೆಟ್ 70 ಕೋಟಿ ರೂಪಾಯಿ. ಈ ಸಿನಿಮಾ ಭಾರತದ ಒಟ್ಟೂ ಕಲೆಕ್ಷನ್ 1.60 ಕೋಟಿ ರೂಪಾಯಿ ಆಸುಪಾಸಿನಲ್ಲಿದೆ. ವಿಶ್ವ ಮಟ್ಟದಲ್ಲಿ ಚಿತ್ರದ ಗಳಿಕೆ 2 ಕೋಟಿ ರೂಪಾಯಿ ಆಗಿದೆ ಎನ್ನಲಾಗಿದೆ. ಅಂದಹಾಗೆ ಈ ಸಿನಿಮಾಗೆ ಒಬ್ಬರಲ್ಲ, ಇಬ್ಬರಲ್ಲ ಬರೋಬ್ಬರಿ 9 ನಿರ್ಮಾಪಕರಿದ್ದಾರೆ. ಬಾಲಿವುಡ್‌ನ ಏಕ್ತಾ ಕಪೂರ್, ಶೋಭಾ ಕಪೂರ್ ಸೇರಿದಂತೆ ಅನೇಕರು ಹಣ ಹೂಡಿದ್ದಾರೆ. ಹಾಕಿದ ಹಣಕ್ಕೆ ಸಾಕಷ್ಟು ನಷ್ಟ ಉಂಟಾಗಿದೆ.



ಸಿನಿಮಾದ ಕಥೆ ಹಾಗೂ ಮೇಕಿಂಗ್ ವಿಷಯದಲ್ಲಿ ಹಳೆಯ ಟೆಕ್ನಿಕ್ ಬಳಸಲಾಗಿದೆ. ಈ ಕಾರಣಕ್ಕೆ ಜನರಿಗೆ ಸಿನಿಮಾ ಇಷ್ಟ ಆಗಿಲ್ಲ. ಸಿನಿಮಾದ ಕಥೆಯಲ್ಲಿ ಗಟ್ಟಿತನ ಇಲ್ಲ. ನಿರೂಪಣೆ ಕೂಡ ಅಷ್ಟು ಉತ್ತಮವಾಗಿಲ್ಲ. ಈ ಎಲ್ಲಾ ಕಾರಣದಿಂದ ಸಿನಿಮಾ ಇಷ್ಟು ಹೀನಾಯ ಕಲೆಕ್ಷನ್ ಕಂಡಿದೆ! ಅಂದಹಾಗೆ, ವೃಷಭ ನಿರ್ದೇಶಕ ನಂದಕಿಶೋರ್ ಇಲ್ಲಿ ಕೆಲವರಿಗೆ ದೋಖಾ ಮಾಡಿ 420 ಕೇಸ್ ಹೆಟ್ಟಿಸಿಕೊಂಡು ಕೋರ್ಟ್‌ಗೆ ಅಲೆಯುತ್ತಿದ್ದಾರೆ.ಇಲ್ಲಿ ಒಂದೇ ಒಂದು ಸಿನಿಮಾ ಸಿಗುತ್ತಿಲ್ಲ. ಸೋದರ ತರುಣ್ ಆಗಲಿ ಅಮ್ಮ ಮಾಲತಿ ಅವರಾಗಲಿ ಈತನನ್ನು ಹತ್ತಿರ ಬಿಟ್ಟುಕೊಳ್ಳುತ್ತಿಲ್ಲ.




ಸ್ವಂತ ಮನೆಯಲ್ಲೇ ಹೆಸರು ಕೆಡಿಸಿಕೊಂಡಿರೋ ನಂದನಿಗೆ ಯಾರೂ ಸಿನಿಮಾ ಕೊಡ್ತಿಲ್ಲ. ಹೀಗಿರುವಾಗ, ಈ ಕಿಲಾಡಿ ಅದೇಗೆ ತಾನೇ ಮೋಹನ್ ಲಾಲ್ ಅವರನ್ನು ಏಮಾರಿಸಿ ವೃಷಭ ಮಾಡಿದ ಅನ್ನೋದೇ ಯಕ್ಷ ಪ್ರಶ್ನೆ! ☯

# ಟ್ರೇಲರ್‌ನಲ್ಲೇ ಕುತೂಹಲ ಮೂಡಿಸಿದೆ 'ಮಾಜರ್'

ಸಂಗೀತ ಸಿನಿ ಹೌಸ್ ಲಾಂಛನದಲ್ಲಿ ಡಾ|| ಮುರುಗನಂದನ್ ಎಮ್(ಪುಲಿಮುರುಗನ್) ಅವರು ನಿರ್ಮಿಸಿರುವ, ಲೋಕಲ್ ಲೋಕಿ ನಿರ್ದೇಶನದೊಂದಿಗೆ ಪ್ರಮುಖಪಾತ್ರದಲ್ಲೂ ನಟಿಸಿರುವ 'ಮಾಜರ್'ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ಅಲ್ಲದೆ ಟ್ರೇಲರ್ ಸಾಕಷ್ಟು ಕುತೂಹಲ ಮೂಡಿಸಿದೆ. ಟ್ರೇಲರ್ ಬಿಡುಗಡೆ ನಂತರ ನಿರ್ದೇಶಕ ಲೋಕಿ (ಲೋಕಲ್ ಲೋಕಿ) ಮಾತನಾಡಿದ್ದಾರೆ.

ದೇಶದಲ್ಲಿ ನಾನು ಕಂಡಿರುವ ನಿರ್ಭಯ




ಹತ್ಯೆ ಮೊದಲಾದ ದುರಂತಗಳೆ ಈ ಕಥೆ ಬರೆಯಲು ಮುಖ್ಯ ಕಾರಣ. ಇಂತಹ ಕೃತ್ಯಗಳನ್ನು ಪ್ರತಿಯೊಬ್ಬರು ಖಂಡಿಸಬೇಕು. ಹೆಣ್ಣುಮಕ್ಕಳಿಗೆ ನ್ಯಾಯ ಸಿಗಬೇಕು ಎಂಬುದೆ 'ಮಾಜರ್' ಚಿತ್ರದ ಮುಖ್ಯ ಉದ್ದೇಶ. ನಾನು ಈ ಚಿತ್ರವನ್ನು ನಿರ್ದೇಶಿಸುವುದರ ಜೊತೆಗೆ ಮುಖ್ಯಪಾತ್ರದಲ್ಲಿ ಅಭಿನಯ ಕೂಡ ಮಾಡಿದ್ದೇನೆ. ಮುರುಗನಂದನ್ ಅವರು ನಿರ್ಮಾಣ ಮಾಡಿದ್ದಾರೆ. ಎ.ಟಿ. ರವೀಶ್ ಸಂಗೀತ ನಿರ್ದೇಶನ, ರಾಜೇಶ್ ರಾಮನಾಥ್ ಹಿನ್ನಲೆ ಸಂಗೀತ ಹಾಗೂ ಗಗನ್ ಗೌಡ, ವಿನಯ್ ಗೌಡ, ಜಗನ್ ಬಾಬು ಅವರ ಛಾಯಾಗ್ರಹಣ 'ಮಾಜರ್' ಚಿತ್ರಕ್ಕಿದೆ. ಶ್ರೀಹಾನ್, ದೀಪಕ್, ಉಗ್ರಂ ರವಿ, ಸಂಭ್ರಮಶ್ರೀ, ರಾಜು, ರಂಜನ್, ಅಜಯ್ ಶರ್ಮ ಮುಂತಾದವರು ಈ ಚಿತ್ರದಲ್ಲಿ ನಟಿಸಿದ್ದಾರೆ. ಜನವರಿ 15 ರ ಸಂಕ್ರಾಂತಿ ದಿನದಂದು ನಮ್ಮ ಚಿತ್ರ ಬಿಡುಗಡೆಯಾಗಲಿದೆ ಎಂದು ನಿರ್ದೇಶಕ ಲೋಕಲ್ ಲೋಕಿ ತಿಳಿಸಿದ್ದಾರೆ.

ಇನ್ನೂ ನಿರ್ಮಾಪಕ ಮುರುಗ ನಂದನ್ ಮಾತನಾಡಿ, ನಾನು ಉದ್ಯಮಿ ಹಾಗೂ ರಾಜಕಾರಣಿ. ಚಿತ್ರ ನಿರ್ಮಾಣ ಮಾಡಬೇಕೆಂಬುದು ನನಗೆ ಮೊದಲಿನಿಂದಲೂ ಆಸೆ. ಅದು ಈ ಚಿತ್ರದ ಮೂಲಕ ಈಡೇರಿದೆ. ನನ್ನ ನಿರ್ಮಾಣದ ಮೊದಲ ಚಿತ್ರಕ್ಕೆ ನಿಮ್ಮೆಲ್ಲರ ಪ್ರೋತ್ಸಾಹವಿರಲಿ... ಎಂದಿದ್ದಾರೆ. ನಟಿ ಸಂಭ್ರಮಶ್ರೀ ಮಾತನಾಡಿ, ಹೆಣ್ಣು ಮಕ್ಕಳ ಮೇಲೆ ನಡೆಯುವ ದೌರ್ಜನ್ಯವನ್ನು ತೆರೆಯ ಮೇಲೆ ನೋಡಿದಾಗಲೇ ಇಷ್ಟು ಭಯ ಆಗತ್ತೆ. ಇನ್ನೂ ಅನುಭವಿಸಿದವರ ಕಷ್ಟ ನೆನೆಸಿಕೊಳ್ಳಲು ಆಗುವುದಿಲ್ಲ. ಹೆಣ್ಣುಮಕ್ಕಳ ಮೇಲೆ ನಡೆಯುವ ದೌರ್ಜನ್ಯ ಕೊನೆಯಾಗಬೇಕು ಎಂದಿದ್ದಾರೆ.

ಇನ್ನೂ, ಈ ಚಿತ್ರದಲ್ಲಿ ನಟಿಸಿರುವ ಶ್ರೀಹಾನ್, ದೀಪಕ್, ಅಜಯ್ ಶರ್ಮ, ರಾಜು, ರಂಜನ್, ಉಗ್ರಂ ರವಿ ಹಾಗೂ ನೃತ್ಯ ನಿರ್ದೇಶಕಿ ಗೀತಾ ಮತ್ತು ನೃತ್ಯ ನಿರ್ದೇಶಕ ರಂಜನ್ 'ಮಾಜರ್' ಕುರಿತು ತಮ್ಮದೇ ಅನುಭವ ಹಂಚಿಕೊಂಡು ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. ಒಟ್ಟಾರೆ, ಮಾಜರ್ ಬಿಡುಗಡೆಗೂ ಮುನ್ನವೇ ಕೇವಲ ಟ್ರೇಲರ್ ನಿಂದಲೇ ಕುತೂಹಲ ಕೆರಳಿಸಿದೆ!! ☯

# ದಿ ಟಾಸ್ಕ್ ಇನ್ ಟಾಲಿವುಡ್!

ರಾಘು ಶಿವಮೊಗ್ಗ ನಿರ್ದೇಶನದ ಕೋವಿಡ್ ಅಕ್ರಮದ ಮೆಡಿಸಿನ್ ಕ್ರೈಂ ಥ್ರಿಲ್ಲರ್ 'ದಿ ಟಾಸ್ಕ್' ಇಲ್ಲಿ 25 ದಿನ ಯಶಸ್ವಿ ಓಟವನ್ನು ಪೂರೈಸಿದ ಬೆನ್ನಲ್ಲೇ ಇದೀಗ ತೆಲುಗಿನಲ್ಲಿ ಬಿಡುಗಡೆ ಕಾಣುತ್ತಿದೆ. ಅಲ್ಲಿ ತೆಲುಗಿನಲ್ಲಿ ಪ್ರಖ್ಯಾತ ನಿರ್ದೇಶಕ ಮುತ್ಯಾಲ ಸುಬ್ಬಯ್ಯ ನವರ ಮಗ ಅನಂತ ಕಿಶೋರ್ ಈ ಚಿತ್ರವನ್ನ ಬಲು ಅದ್ದೂರಿಯಾಗಿ ಬಿಡುಗಡೆ ಮಾಡಲು ಮುಂದಾಗಿದ್ದಾರೆ.




ಜೈ ಸೂರ್ಯ ಆರ್ ಅಜಾದ್ ಮತ್ತು ಸಾಗರ್ ರಾವ್ ಅಭಿನಯದ 'ದಿ ಟಾಸ್ಕ್' ನಿಜಕ್ಕೂ ಸಮಾಜದ ಕಣ್ಣು ತೆರೆಸುವ ಚಿತ್ರವಾಗಿತ್ತು. ಒಳ್ಳೆಯ ಕತೆ, ಚಿತ್ರಕತೆ. ಆದರೆ, ಇಲ್ಲಿನ ಜನರಿಗೆ ತೊಡೆ ಸೊಂಟ ದ ಮೇಲಿರುವ ವ್ಯಾಮೋಹ ಸತ್ಯಕತೆಗಳ ಮೇಲಿರುವುದಿಲ್ಲ! ಹೀಗಾಗಿ, 25 ದಿನಕ್ಕೆ ಥಿಯೇಟರ್ ಬಿಟ್ಟುಕೊಡಬೇಕಾದ ಅನಿವಾರ್ಯ! ದಿ ಟಾಸ್ಕ್ ಅಲ್ಲಾದರೂ ಯಶಸ್ವಿಯಾಗಿ ಜನ ಮನ್ನಣೆಗಳಿಸಲಿ ಎಂಬುದು ನಮ್ಮ ಹಾರೈಕೆ. ☯

Vol. 41 No. 31 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666 cenewsreporter@gmail.com
http//policenews.news https://www.facebook.com/profile.php?id=61579674874846 tps://www.instagram.com/police_news?igsh=MWJ6bHJwZDRmZDc1aQ==